ನಿಮ್ಮೊಡನೆ

# ಸಹಾನುಭೂತಿಯಿರಲಿ ಮುಟ್ಟಿನ ರಜೆಗೆ

> ಸಂಬಳ ಸಹಿತ ರಜೆ ಅಂದರೆ ಉದ್ಯೋಗಾವಕಾಶಗಳು ಕಡಿಮೆಯಾಗುತ್ತವೆ, ದುರುಪಯೋಗವಾಗುವ ಸಾಧ್ಯತೆಯೂ ಇದೆ; ಉದ್ಯೋಗದಾತರು ಇನ್ನು ಮೇಲೆ ಹೆಣ್ಣುಮಕ್ಕಳನ್ನು ಕೆಲಸಕ್ಕೆ ತೊಗೊಬೇಕಾದರೆ ಯೋಚಿಸುತ್ತಾರೆ ಎಂಬೆಲ್ಲ ವಾದಗಳು ಹರಿದಾಡುತ್ತಿವೆ. ಕನಸು ಕಸುವು ಇರುವ ಮಹತ್ವಾಕಾಂಕ್ಷಿಗಳು ಈ ರಜೆಗಳ ದುರುಪಯೋಗವನ್ನಂತೂ ಮಾಡಿಕೊಳ್ಳುವುದಿಲ್ಲ.


ವಿಜಯ

ಋತುಸ್ರಾವದ ಆರಂಭಿಕ ದಿನಗಳಲ್ಲಿ ಅಸಾಧ್ಯವಾದ ಹೊಟ್ಟೆನೋವು, ಕಿಬ್ಬೊಟ್ಟೆಯಲ್ಲಿ ಸೆಳಕು, ಕೈಕಾಲುಗಳಲ್ಲಿ ಸೆಳೆತ, ಕೆಲವರಿಗೆ ವಾಂತಿ ಸಹ ಆಗುವ ಸಾಧ್ಯತೆಗಳಿರುತ್ತವೆ. ಇವನ್ನೆಲ್ಲ ಗಮನದಲ್ಲಿಟ್ಟುಕೊಂಡು ಮುಟ್ಟಿನ ರಜೆಯನ್ನು ಕರ್ನಾಟಕ ಸರಕಾರ ಜಾರಿಗೊಳಿಸಿದೆ. ಇದು ಸ್ವಾಗತಾರ್ಹವಾಗಿರುವ ಕ್ರಮ.

ಋತುಸ್ರಾವದ ಬಗ್ಗೆ ಜಗಜ್ಜಾಹೀರು ಮಾಡಬೇಕೆ ಎಂಬಂಥ ಕೊಂಕು ಒಂದು ಹರಿದಾಡುತ್ತಿದೆ. ಈ ಬಗ್ಗೆ ಮುಕ್ತವಾಗಿ ಮಾತಾಡುವ ಪರಿಸರ ನಿರ್ಮಾಣವಾಗಬೇಕಿದೆ. ಜಗಜ್ಜಾಹೀರು ಆಗಲು ಅದೇನೂ ಮುಚ್ಚಿಡುವ ವಿಷಯವಲ್ಲ. ಕದ್ದುಮುಚ್ಚಿ ಆಗಬೇಕಾದ ನೈಸರ್ಗಿಕ ಪ್ರಕ್ರಿಯೆ ಅಲ್ಲ. ಅದೆಂಥದ್ದೋ ಒಂದು ಸಂಕೋಚದ ಸಂಗತಿ ಎಂಬಂತೆ ಪರಿಗಣಿಸುವುದು ಕಡಿಮೆ ಆಗಬೇಕಿದೆ.

ರಜೆ ಕೊಟ್ಟಾಕ್ಷಣ ಇದು, ದುರುಪಯೋಗವಾಗಬಹುದು, ಋತುಬಂಧವಾದವರೂ ತೊಗೊಳ್ತಾರೆ ಎಂಬ ಅನುಮಾನ ಮತ್ತು ಆತಂಕಗಳೆರಡೂ ವ್ಯಕ್ತವಾಗಿವೆ.

ಸಾರ್ವತ್ರಿಕವಾಗಿ ಎಲ್ಲರಿಗೂ ನೋವು ತೀವ್ರತರವಾಗಿರುತ್ತದೆಯೇ? ಎನ್ನುವ ಪ್ರಶ್ನೆಯಂತೆಯೇ ಎಲ್ಲರಿಗೂ ಮೊದಲ ದಿನವೇ ಕಷ್ಟವಾಗುವುದಿಲ್ಲ. ಕೆಲವರಿಗೆ ಎರಡನೆಯ ದಿನವೂ, ಇನ್ನೂ ಕೆಲವರಿಗೆ ಕೊನೆಯ ದಿನವೂ ಈ ನೋವು, ಆರೋಗ್ಯದಲ್ಲಿ ಏರುಪೇರು, ಕಿರಿಕಿರಿಯಾಗುವುದು, ಸಿಡಿಮಿಡಿಗೊಳ್ಳುವುದು, ಆತ್ಮೀಯರ ಮೇಲೆ ರೇಗುವುದು ಇಂಥ ಎಲ್ಲ ಕಿರಿಕಿರಿಗಳೂ ಆಗುತ್ತವೆ. ಆತ್ಮೀಯರಿಗೆ ಇದು ಅರ್ಥವಾಗಿ ಡಾರ್ಕ್ ಚಾಕೊಲೇಟ್ ಕೊಡಿಸುವುದೋ, ಬಿಸಿನೀರಿನ ಚೀಲ ಕಾಯಿಸಲು ಕೊಟ್ಟು ಆರೈಕೆ ಮಾಡುವುದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಮಹಿಳೆಯರೂ ಇಂಥ ದಿನಗಳಲ್ಲಿ ಬೆರೆಯುವುದರಿಂದ ಹಿಂಜರಿಯುತ್ತಾರೆ.

ಕೆಲಸದ ವಿಷಯ ಬಂದಾಗ ಸಾಮಾನ್ಯವಾಗಿ ಮಹಿಳೆಯರು ತಮ್ಮ ಪಾಲಿನ ಕೆಲಸವನ್ನು ಮುಗಿಸಿದ ನಂತರವೇ ನಿಡುಸುಯ್ಯುತ್ತಾರೆ. ಯಾರಿಗೂ ತಮ್ಮ ಪಾಲಿನ ಕೆಲಸವನ್ನುಳಿಸಿ ವಿರಮಿಸಬೇಕು ಎಂಬ ಮನಸ್ಥಿತಿ ಇರುವುದಿಲ್ಲ. ಮಹಿಳಾ ಸಹೋದ್ಯೋಗಿಗಳ ಕೆಲಸವನ್ನು ತಮ್ಮೊಡನೆ ಹೋಲಿಸಿಕೊಂಡು ಕುಹಕವಾಡುವ ಬದಲು, ಕೂಲಿ ಕಾರ್ಮಿಕರು, ಗಾರ್ಮೆಂಟ್ ಕೆಲಸದವರು ಮತ್ತು ಅಂಗಡಿಗಳಲ್ಲಿ ಹನ್ನೆರಡು ಗಂಟೆ ನಿಂತು ಕೆಲಸ ಮಾಡುವವರನ್ನು ಒಮ್ಮೆ ನೆನಪಿಸಿಕೊಳ್ಳಿ. ಅವರೆಲ್ಲರೂ ಒಂದು ದಿನದ ಕೂಲಿ ತ್ಯಾಗ ಮಾಡುವುದೇ, ವಿರಮಿಸುವುದೇ ಎಂಬುದನ್ನು ತಕ್ಕಡಿಯಲ್ಲಿ ತೂಗಿಯೇ ಕೆಲಸಕ್ಕಿಳಿಯುತ್ತಾರೆ.

ಮಹತ್ವಾಕಾಂಕ್ಷಿಗಳು, ಇಷ್ಟೆಲ್ಲ ವರ್ಷಗಳಲ್ಲಿ ಇಂಥ ಯಾವುದೇ ರಜೆಯ ಉಪಕಾರವಿಲ್ಲದೆಯೂ ಮುಂದೆ ಸಾಗಿದ್ದಾರೆ. ಇದು ಎಂದಿಗೂ ತಮ್ಮ ಸಾಧನೆಯ ಹಾದಿಯಲ್ಲಿ ಅಡೆತಡೆಯಾಗಿದೆ ಎಂದು ಭಾವಿಸಿಲ್ಲ.

ಇಷ್ಟು ವರ್ಷಗಳಲ್ಲಿ ಯಾವುದೇ ರಿಯಾಯಿತಿ ಇಲ್ಲದೆಯೇ ದುಡಿದಿಲ್ಲವೇ ಎಂಬ ಪ್ರಶ್ನೆಯೂ ಕೆಲವರದ್ದಾಗಿದೆ. ಈ ಅನುಕೂಲ ನೀಡಿರುವ ಹಿಂದೆ ಸಹಾನುಭೂತಿ ಮಾತ್ರ ಕೆಲಸ ಮಾಡಿರುವ ಸಾಧ್ಯವಿದೆ. ಸಹನಾಭೂತಿಯಿಂದ ಕಾಣಬೇಕಿರುವ ವಿಷಯವಿದು.

ಈ ಹಿಂದೆ ಹೆರಿಗೆ ರಜೆ ಕಡ್ಡಾಯ ಮಾಡಿದಾಗಲೂ ಇಂಥವೇ ಅಪಸ್ವರಗಳು ಎದ್ದಿದ್ದವು. ಆರು ತಿಂಗಳ ಸಂಬಳಸಹಿತ ರಜೆ ಕಡ್ಡಾಯ ಮಾಡಿದಾಗಲೂ ಇನ್ನು ಮೇಲೆ ಮಹಿಳೆಯರಿಗೆ ಕೆಲಸ ಸಿಗುವುದೇ ದುಸ್ತರ ಎಂಬಂಥ ಮಾತುಗಳನ್ನಾಡಿದ್ದರು. ಉದ್ಯೋಗದಾತರಿಗೆ ಇದು ಹೊರೆಯಾಗುತ್ತದೆ. ಮಹಿಳೆಯರನ್ನು ಪರಿಗಣಿಸುವುದನ್ನೇ ಕಡೆಗಣಿಸಲಾಗುತ್ತದೆ ಎಂದೂ ಹೇಳಲಾಗಿತ್ತು. ಇಂಥ ಬೆಳವಣಿಗೆಗಳು ಆಗಿದ್ದರೂ ಅವುಗಳ ಪ್ರಮಾಣ ಕಡಿಮೆಯೇ.

ಸಹಿಸಬಹುದಾದ ನೋವುಗಳನ್ನು ನುಂಗಿ ಕೆಲಸ ಮಾಡುವುದು ಮಹಿಳೆಯರಿಗೆ ಅಭ್ಯಾಸವೇ ಆಗಿದೆ. ಅದು ಸಹಜವೆಂಬಂತೆ ಆಗಿದ್ದು ಪುರುಷಪ್ರಧಾನ ವ್ಯವಸ್ಥೆಯಿಂದ. ಮುಟ್ಟಿನ ಸಮಸ್ಯೆಗಳಾದಾಗ ಯಾವ ಮುಲಾಜಿಲ್ಲದೇ, ಮುಜುಗರವಿಲ್ಲದೇ ರಜೆ ತೆಗೆದುಕೊಳ್ಳುವಂಥ ಪರಿಸರ ನಿರ್ಮಾಣವಾಗಬೇಕು. ಇದಕ್ಕೆ ಧೈರ್ಯಬೇಕು ಅಂತಲ್ಲ, ಧೈರ್ಯ ಬೇಕು ಎನ್ನುವಂಥ ಪರಿಸರ ಇದೆಯಲ್ಲ ಅದು ಬದಲಾಗಬೇಕು.

ಔದ್ಯೋಗಿಕ ವಲಯದಲ್ಲಿ ಕಾರ್ಯಕ್ಷಮತೆಯುಳ್ಳ ಹೆಣ್ಣುಮಕ್ಕಳನ್ನು ರಜೆ ಮತ್ತು ಹೆರಿಗೆ ಕಾರಣದಿಂದಾಗಿ ಕಡೆಗಣಿಸುವುದು ಸರಿಯಲ್ಲ ಮತ್ತು ಸಾಧ್ಯವೂ ಇಲ್ಲ. ಸಾಧುವೂ ಅಲ್ಲ. ಪ್ರತಿಯೊಬ್ಬರಿಗೂ ತಮ್ಮ ಭವಿಷ್ಯ ನಿರ್ಮಾಣದಲ್ಲಿ ಉನ್ನತ ಹಂತಕ್ಕೆ ಹೋಗಲು ಯಾವುದನ್ನು ಎಷ್ಟು ಸೈರಣೆ ಮಾಡಬೇಕು ಎಂಬ ಅಂದಾಜು ಇದ್ದೇ ಇರುತ್ತದೆ.

ಇನ್ನು ಕನಸುಗಳಿದ್ದು, ಕಸುವೂ ಇದ್ದರೆ ಈ ರಜೆಯನ್ನು ನಿವಾಳಿಸಿ ಮುನ್ನಡೆಯುವ ಮನೋಧೈರ್ಯ ಹೆಣ್ಣುಮಕ್ಕಳಿಗೆ ಇದೆ. ಈ ಕ್ರಮವನ್ನು ಸಹಾನುಭೂತಿಯಿಂದ ನೋಡಿಕೊಳ್ಳುವ ಮನಸ್ಥಿತಿ ಸಮಾಜಕ್ಕೆ ಇರಬೇಕು.

**ರಶ್ಮಿ ಎಸ್**